**<u>ಹೆಚ್ಚುವರಿ ದಿವಾಣಿ ನ್ಯಾಯಾಧೀಶರು ವ ಜೆ.ಎಂ.ಎಫ್.ಸಿ., ಇಂಡಿ</u>**

**ದಿನಾಂಕ <u>15.07.2023</u>**

# <u>ಸಿ.ಸಿ.133/2017</u>

**ಫಿರ್ಯಾದುದಾರರು** : ರಾಜ್ಯಪರ ಝಳಕಿ ಪೋಲಿಸರು

**ವಿರುದ್ಧ**

**ಆರೋಪಿತರು** :

1. ಹಣಮಂತ ತಂ. ವಿಠೋಬಾ ಹೊನಗೊಂಡ
2. ಭರ್ಮಣ್ಣ ತಂ. ಶ್ರೀಮಂತ ಅಲಬಗೊಂಡ
3. ಚನ್ನಪ್ಪ ತಂದೆ ಬಲವಂತರಾಯ ಅಲಬಗೊಂಡ,
4. ಚನ್ನಪ್ಪಾ ತಂ.ಬೀರಪ್ಪಾ ಅರ್ಜನಾಳ,
5. ಬಲವಂತ ತಂ.ಶಿವಣ್ಣ ಅಲಬಗೊಂಡ,
6. ಹಣಮಂತ ತಂ. ವಿಠೋಬಾ ಅಲಬಗೊಂಡ (Split up)
7. ಸಿದ್ದಪ್ಪಾ ತಂ.ಹಣಮಂತ ಹೊನಗೊಂಡ

ಎಲ್ಲರೂ ಸಾ: ಅಂಜುಟಗಿ, ತಾ.ಇಂಡಿ.

**<u>:: ದೋಷಾರೋಪಣೆ ::</u>**

ಶ್ರೀ ಈಶ್ವರ ಎಸ್.ಎಮ್, ಬಿಎ.ಎಲ್ ಎಲ್ ಬಿ, ಪ್ರಧಾನ ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ಇಂಡಿ ಆದ ನಾನು ನಿಮ್ಮ ವಿರುದ್ದ ಮಾಡಿರುವ ದೋಷಾರೋಪಣೆ ಎನೆಂದರೆ:-

ಆರೋಪಿತರಾದ ನಿಮ್ಮಗಳ ಪೈಕಿ 1 ನೇ ಆರೋಪಿಯಾದ ನೀನು ಫಿರ್ಯಾದಿದಾರನ ತಮ್ಮನ ಮಗನಾದ ಸಾಕ್ಷಿದಾರ-5 ರವರನ್ನು ದಿನಾಂಕ 09.03.2016 ರಂದು ಮಧ್ಯಾಹ್ನ 12.00 ಗಂಟೆಗೆ ಆತನ ಜಮೀನದ ಮೇಟಗಿಯ ಕಡೆಯಿಂದ ಅಂಜುಟಗಿ ಗ್ರಾಮದ ಕಡೆಗೆ ಅಮವಾಸೆಯ ನಿಮಿತ್ಯವಾಗಿ ಹೋಗುವಾಗ ಆತನಿಗೆ 1 ನೇ ಆರೋಪಿತನಾದ ನೀನು ಅಡ್ಡಗಟ್ಟಿ

ತರುಬಿ ಖಲಾಸ ಮಾಡುತ್ತೇನೆ ಎಂದು ಜೀವದ ಬೆದರಿಕೆ ಹಾಕಿದಾಗ ಇದೇ ವಿಷಯದ ಬಗ್ಗೆ ದಿನಾಂಕ 13.03.2016 ರಂದು ಸಾಯಂಕಾಲ 5.30 ಗಂಟೆಯ ಸುಮಾರಿಗೆ ಅಂಜುಟಗಿ ಗ್ರಾಮದ ಅಂಬಾಭವನಿ ಗುಡಿಯ ಹತ್ತಿರ ಜಗಳ ತೆಗೆಯುವ ಉದ್ದೇಶದಿಂದ ಆರೋಪಿತರಾದ ನೀವು ಏಕೋದ್ದೇಶವನ್ನು ಹೊಂದಿ, ಅಕ್ರಮ ಕೂಟವನ್ನು ರಚಿಸಿ ಅದರ ಸದಸ್ಯರಾಗುವುದರ ಮೂಲಕ ಭಾ.ದಂ.ಸಂ. ಕಲಂ143 ಸಹವಾಚಕ 149 ರ ಅಡಿಯಲ್ಲಿ ದಂಡನೀಯ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞೆಯೊಳಗೆ ಮಾಡಿರುವಿರಿ.

ಎರಡನೆಯದಾಗಿ, ಮೇಲೆ ಹೇಳಿದ ದಿನಾಂಕ, ಸ್ಥಳ ಮತ್ತು ಸಮಯದಲ್ಲಿ ಆರೋಪಿತರಾದ ನೀವುಗಳು ಏಕೋದ್ದೇಶವನ್ನು ಹೊಂದಿ, ಅಕ್ರಮ ಕೂಟವನ್ನು ರಚಿಸಿ ಅದರ ಸದಸ್ಯರಾಗಿದ್ದು, ನಿಮ್ಮ ಏಕೋದ್ದೇಶವನ್ನು ಈಡೇರಿಸಲು ಬಲವನ್ನು ಪ್ರಯೋಗಿಸಿ, ದೊಂಬಿಯನ್ನು ಮಾಡಿದ್ದು, ಆ ಮೂಲಕ ಭಾರತೀಯ ದಂಡ ಸಂಹಿತೆ ಕಲಂ.**147** ಸಹವಾಚಕ ಕಲಂ **149** ರ ಅಡಿಯಲ್ಲಿ ದಂಡನೀಯ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞೆಯೊಳಗೆ ಮಾಡಿರುವಿರಿ.

ಮೂರನೆಯದಾಗಿ ಮೇಲೆ ತಿಳಿಸಿದ ದಿನಾಂಕ, ಸಮಯ ಮತ್ತು ಸ್ಥಳದಲ್ಲಿ ಆರೋಪಿತರಾದ ನೀವುಗಳು ಕಾನೂನು ಬಾಹೀರ ಸಂಘಟನೆಯ ಸದಸ್ಯರಾಗಿದ್ದು, ಆರೋಪಿತರಾದ ನೀವುಗಳು ಮಾರಕ ಆಯುಧವಾದ ಕಲ್ಲನ್ನು ಹೊಂದಿ ಸಾಕ್ಷಿದಾರ -4 ಮತ್ತು 5 ರವರಿಗೆ ಹಲ್ಲೆ ಮಾಡಲು ಉಪಯೋಗಿಸಿದ್ದು, ಹೀಗೆ ಆರೋಪಿತರಾದ ನೀವುಗಳೆಲ್ಲರೂ ಏಕೋದ್ದೇಶವನ್ನು ಈಡೇರಿಸಲು ಬಲವನ್ನು ಪ್ರಯೋಗಿಸಿದ್ದು, ಆ ಮೂಲಕ ಭಾರತೀಯ ದಂಡ

ಸಂಹಿತೆ ಕಲಂ.148 ಸಹವಾಚಕ ಕಲಂ **149** ರ ಅಡಿಯಲ್ಲಿ ದಂಡನೀಯ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞೆಯೊಳಗೆ ಮಾಡಿರುವಿರಿ.

ನಾಲ್ಕನೇಯದಾಗಿ ಮೇಲೆ ಹೇಳಿದ ದಿನಾಂಕ, ಸ್ಥಳ ಮತ್ತು ಸಮಯದಲ್ಲಿ ಆರೋಪಿತರಾದ ನೀವುಗಳು ಏಕೋದ್ದೇಶವನ್ನು ಹೊಂದಿ, ಅಕ್ರಮ ಕೂಟವನ್ನು ರಚಿಸಿ ಅದರ ಸದಸ್ಯರಾಗಿದ್ದು, ನಿಮ್ಮಗಳ ಪೈಕಿ 2 ನೇ ಆರೋಪಿತರಾದ ನೀವು ಕೈಯಿಂದ ಫಿರ್ಯಾದಿದಾರನಿಗೆ ಹಲ್ಲೆ ಮಾಡಿದ್ದು, ಸ್ವ ಇಚ್ಚೆಯಿಂದ ಸಾಮಾನ್ಯ ಸ್ವರೂಪದ ಗಾಯಪಡಿಸುವುದರ ಮೂಲಕ ಭಾರತೀಯ ದಂಡ ಸಂಹಿತೆ ಕಲಂ.**323** ಸಹವಾಚಕ ಕಲಂ **149** ರ ಅಡಿಯಲ್ಲಿ ದಂಡನೀಯ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞೆಯೊಳಗೆ ಮಾಡಿರುವಿರಿ.

ಐದನೇಯದಾಗಿ, ಮೇಲೆ ಹೇಳಿದ ದಿನಾಂಕ, ಸ್ಥಳ ಮತ್ತು ಸಮಯದಲ್ಲಿ ಆರೋಪಿತರಾದ ನೀವುಗಳು ಏಕೋದ್ದೇಶವನ್ನು ಹೊಂದಿ, ಅಕ್ರಮ ಕೂಟವನ್ನು ರಚಿಸಿ ಅದರ ಸದಸ್ಯರಾಗಿದ್ದು, ನಿಮ್ಮಗಳ ಪೈಕಿ 4 ನೇ ಆರೋಪಿಯಾದ ನೀನು ಕಲ್ಲಿನಿಂದ ಸಾಕ್ಷಿದಾರ 4 ರವರ ಎಡಗಡೆ ಕಿವಿಯ ಮೇಲೆ ಬೆನ್ನಲ್ಲಿ ಹೊಡೆದು ಗಾಯಪಡಿಸಿದ್ದು, ಆರೋಪಿತರಾದ ನೀವು ಅಪಾಯಕಾರಿ ಆಯುಧಗಳನ್ನು ಹೊಂದಿ ಸಾಕ್ಷಿದಾರ 2 ರವರಿಗೆ ಹಲ್ಲೆ ಮಾಡಿ ಸ್ವ ಇಚ್ಚೆಯಿಂದ ರಕ್ತ ಗಾಯಪಡಿಸುವುದರ ಮೂಲಕ ಭಾರತೀಯ ದಂಡ ಸಂಹಿತೆ ಕಲಂ.**324** ಸಹವಾಚಕ ಕಲಂ **149** ರ ಅಡಿಯಲ್ಲಿ ದಂಡನೀಯ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞೆಯೊಳಗೆ ಮಾಡಿರುವಿರಿ.

ಆರನೇಯದಾಗಿ ಮೇಲೆ ಹೇಳಿದ ದಿನಾಂಕ, ಸ್ಥಳ ಮತ್ತು ಸಮಯದಲ್ಲಿ ಆರೋಪಿತರಾದ ನೀವುಗಳು ಏಕೋದ್ದೇಶವನ್ನು ಹೊಂದಿ, ಅಕ್ರಮ ಕೂಟವನ್ನು ರಚಿಸಿ ಅದರ ಸದಸ್ಯರಾಗಿದ್ದು, ಫಿರ್ಯಾದಿಯ ತಮ್ಮನ ಮಗನಾದ ಚಾ.ಸಾ.6 ಗಂಗಪ್ಪನನ್ನು ಎಲ್ಲಿಯೂ ಹೋಗದಂತೆ ಅಡ್ಡಗಟ್ಟಿ ತರುಬಿ ಅಕ್ರಮವಾಗಿ ಬಂಧಿಸಿದ್ದು, ಆ ಮೂಲಕ ಭಾರತೀಯ ದಂಡ ಸಂಹಿತೆ ಕಲಂ**.341** ಸಹ ವಾಚಕ ಕಲಂ **149** ರ ಅಡಿಯಲ್ಲಿ ದಂಡನೀಯ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞೆಯೊಳಗೆ ಮಾಡಿರುವಿರಿ.

ಏಳನೇಯದಾಗಿ, ಮೇಲೆ ಹೇಳಿದ ದಿನಾಂಕ, ಸ್ಥಳ ಮತ್ತು ಸಮಯದಲ್ಲಿ ಆರೋಪಿತರಾದ ನೀವುಗಳು ಏಕೋದ್ದೇಶವನ್ನು ಹೊಂದಿ, ಅಕ್ರಮ ಕೂಟವನ್ನು ರಚಿಸಿ ಅದರ ಸದಸ್ಯರಾಗಿದ್ದು, ಆರೋಪಿತರಾದ ನಿಮ್ಮಗಳ ಪೈಕಿ 1 ನೇ ಆರೋಪಿಯಾದ ನೀನು ಫಿರ್ಯಾದಿಯ ತಮ್ಮನ ಮಗನಾದ ಚಾ.ಸಾ.6 ಗಂಗಪ್ಪನಿಗೆ ಅವಾಚ್ಯ ಶಬ್ದಗಳಿಂದ ಬೈದು ಶಾಂತಿ ಭಂಗವನ್ನು ಉಂಟು ಮಾಡಲು ಉದ್ರೇಕಿಸುವ ಸಲುವಾಗಿ ಉದ್ದೇಶಪೂರ್ವಕವಾಗಿ ಅವಮಾನ ಮಾಡಿದ್ದು, ಆ ಮೂಲಕ ಭಾರತೀಯ ದಂಡ ಸಂಹಿತೆ ಕಲಂ.**504** ಸಹವಾಚಕ ಕಲಂ **149** ರ ಅಡಿಯಲ್ಲಿ ದಂಡನೀಯ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞೆಯೊಳಗೆ ಮಾಡಿರುವಿರಿ.

ಕೊನೆಯದಾಗಿ, ಮೇಲೆ ಹೇಳಿದ ದಿನಾಂಕ, ಸ್ಥಳ ಮತ್ತು ಸಮಯದಲ್ಲಿ ಆರೋಪಿತರಾದ ನೀವುಗಳು ಏಕೋದ್ದೇಶವನ್ನು ಹೊಂದಿ, ಅಕ್ರಮ ಕೂಟವನ್ನು ರಚಿಸಿ ಅದರ ಸದಸ್ಯರಾಗಿದ್ದು, ಆರೋಪಿತರಾದ ನಿಮ್ಮಗಳ ಪೈಕಿ 1 ನೇ ಆರೋಪಿಯಾದ ನೀನು ಫಿರ್ಯಾದಿದಾರರ ತಮ್ಮನ ಮಗನನಾದ ಚಾ.ಸಾ.6 ರವರಿಗೆ ಅಡ್ಡಗಟ್ಟಿ ತರುಬಿ ಹಲ್ಕಟ

ಬೈದಾಡಿ ನಿನಗ ಖಲಾಸ ಮಾಡಿ ದೇವರಾ ಮಾಡತೀನಿ ಅಂತಾ ಜೀವದ ಬೆದರಿಕೆ ಹಾಕಿ ಅಪರಾಧಿಕ ಭಯೋತ್ಪಾದನೆ ಉಂಟುಮಾಡಿದ್ದು, ಆ ಮೂಲಕ ಭಾರತೀಯ ದಂಡ ಸಂಹಿತೆ ಕಲಂ.**506** ಸಹ ವಾಚಕ ಕಲಂ **149** ರ ಅಡಿಯಲ್ಲಿ ದಂಡನೀಯ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞೆಯೊಳಗೆ ಮಾಡಿರುವಿರಿ.

ಆರೋಪಿತರಾದ ನಿಮಗೆ ಮೇಲಿನ ದೋಷಾರೋಪಣೆಯ ವಿಚಾರಣೆಗೆ ಗುರಿಯಾಗಬೇಕೆಂದು ಈ ಮೂಲಕ ನಿರ್ದೇಶಿಸುತ್ತಿದ್ದೇನೆ.

ಸ್ಥಳಃ ಇಂಡಿ.
ದಿನಾಂಕಃ 15.07.2023

ಹೆಚ್ಚುವರಿ ಸಿವಿಲ್ ಮತ್ತು ಜೆ.ಎಂ.ಎಫ್.ಸಿ.
ನ್ಯಾಯಾಧೀಶರು, ಇಂಡಿ.